# ಮಾಸ ಭವಿಷ್ಯ

**-ಅರುಣ ಪಿ. ಭಟ್**



**ಮೇಷ:** ತಿಂಗಳ ಆರಂಭದಲ್ಲಿ ವೃತ್ತಿ ಜೀವನದಲ್ಲಿ ಕೀರ್ತಿ, ಪ್ರತಿಷ್ಠೆಗಳು ಲಭಿಸುತ್ತವೆ. ಉದ್ಯೋಗಸ್ಥರಿಗೆ ಜವಾಬ್ದಾರಿ ಹೆಚ್ಚಲಿದೆ. ವೈಯಕ್ತಿಕ ಜೀವನದಲ್ಲೂ ಉತ್ತಮವಾದ ಸಮಯ ಇದು. ಸಂಬಂಧದ ಪ್ರಾಮುಖ್ಯ ಬಹಳ ಚೆನ್ನಾಗಿ ಅರ್ಥ ಮಾಡಿಕೊಳ್ಳುತ್ತೀರಿ. ಶುಭ: 10,16,28 ಅಶುಭ: 11,14,22.

**ವೃಷಭ:** ತಿಂಗಳ ಆರಂಭದಲ್ಲಿ ಧಾರ್ಮಿಕ ಕಾರ್ಯಕ್ರಮಗಳ ಕಡೆಗೆ ನಿಮ್ಮ ಗಮನ ಹೆಚ್ಚಿರುತ್ತದೆ. ತಿಂಗಳ ಅಂತ್ಯಕ್ಕೆ ವೇತನದಲ್ಲಿ ಏರಿಕೆ ಸಾಧ್ಯತೆ. ವ್ಯಾಪಾರಸ್ಥರಿಗೆ ಲಾಭವಾಗುತ್ತದೆ. ವೈಯಕ್ತಿಕ ಸಂಬಂಧದಲ್ಲಿ ಸಂತಸದ ಕ್ಷಣಗಳನ್ನು ಕಳೆಯಲಿದ್ದೀರಿ. ಶುಭ: 11,17,24 ಅಶುಭ: 14,19,28.





**ಮಿಥುನ:** ಕೌಟುಂಬಿಕ ವಿಚಾರದಲ್ಲಿ ಕೆಲವು ಕಷ್ಟಗಳು ಎದುರಾಗಲಿವೆ. ಆದರೆ ಹೆದರುವ ಅಗತ್ಯ ಇಲ್ಲ. ಸಂಗಾತಿ ಜತೆಗೆ ನಡೆಸುವ ಮಾತುಕತೆ ಉದ್ವಿಗ್ನತೆಗೆ ಕಾರಣವಾಗಬಹುದು. ತಿಂಗಳ ಅಂತ್ಯಕ್ಕೆ ಸರಿಯುತ್ತಾ ವ್ಯಾಪಾರ ವ್ಯವಹಾರ, ಉದ್ಯೋಗದಲ್ಲಿ ವಿಶ್ವಾಸ ಮೂಡಲಿದೆ. ಶುಭ: 10,19, 27 ಅಶುಭ: 13,16,29.

**ಕರ್ಕ:** ಜೀವನದಲ್ಲಿ ಸಂತಸ ಇರುತ್ತದೆ. ಸಂಗಾತಿ ಜತೆ ಉತ್ತಮ ಬಾಂಧವ್ಯ ಇರಲಿದೆ. ಉದ್ಯೋಗ, ವ್ಯಾಪಾರ ಕ್ಷೇತ್ರದಲ್ಲಿ ಯಶಸ್ಸು ಪಡೆಯಲು ಸಾಕಷ್ಟು ಅವಕಾಶಗಳು ದೊರೆಯಲಿವೆ. ಆತ್ಮವಿಶ್ವಾಸ ಹೆಚ್ಚಾಗಲಿದೆ. ಶುಭ: 15,20,28 ಅಶುಭ: 11,16,24.





**ಸಿಂಹ:** ರಾಜಕಾರಣ, ಸಮಾಜ ಸೇವೆ, ತಂತ್ರಜ್ಞಾನ ಹಾಗೂ ವೈದ್ಯಕೀಯ ಕ್ಷೇತ್ರದಲ್ಲಿ ಇರುವವರಿಗೆ ತಿಂಗಳ ಆರಂಭದಲ್ಲಿ ಪ್ರಗತಿ ಇದೆ. ಉದ್ಯೋಗ ನಿಮಿತ್ತವಾಗಿ ಈ ಅವಧಿಯಲ್ಲಿ ದೂರ ಪ್ರಯಾಣ ಮಾಡಬೇಕಾದ ಸನ್ನಿವೇಶ ಸೃಷ್ಟಿಯಾಗಬಹುದು. ಶುಭ: 11,19,26 ಅಶುಭ: 14,20,29.

**ಕನ್ಯಾ:** ಮಗ ಅಥವಾ ಮಗಳ ಏಳ್ಗೆ, ಪ್ರಗತಿಯಿಂದ ಸಂತಸ ಹೆಮ್ಮೆ ಉಂಟಾಗುತ್ತದೆ. ಅವರ ಶಿಕ್ಷಣ, ಉದ್ಯೋಗ, ಭವಿಷ್ಯದ ಬಗ್ಗೆ ಹೆಚ್ಚು ಗಮನ ನೀಡುತ್ತೀರಿ. ಸಂಗಾತಿ ಜತೆ ಬಾಂಧವ್ಯ ಗಟ್ಟಿಯಾಗಿರುತ್ತದೆ. ಆರೋಗ್ಯ ಸಮಸ್ಯೆಗಳು ಕಾಡಬಹುದು. ಶುಭ: 10,16,27 ಅಶುಭ: 8,17,28.





**ತುಲಾ:** ಮ್ಯಾನೇಜ್‌ಮೆಂಟ್, ವೈದ್ಯಕೀಯ, ತಂತ್ರಜ್ಞಾನ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಇರುವವರಿಗೆ ಯಶಸ್ಸಿದೆ. ಉದ್ಯಮಿಗಳು ವ್ಯಾಪಾರಸ್ಥರಿಗೆ ಉತ್ತಮ ಸಮಯ ಇದು. ಮಕ್ಕಳ ಮದುವೆಗಾಗಿ ಸೂಕ್ತ ಸಂಬಂಧದ ಹುಡುಕಾಟದಲ್ಲಿದ್ದರೆ ಪ್ರಯತ್ನದಲ್ಲಿ ಸಾಫಲ್ಯ. ಶುಭ: 9,16,24 ಅಶುಭ: 11,18,29.

**ವೃಶ್ಚಿಕ:** ನಿಮ್ಮ ಸಾಮರ್ಥ್ಯ ಹೆಚ್ಚಲಿದೆ. ಕೌಟುಂಬಿಕ ಜೀವನದಲ್ಲೂ ಅದೃಷ್ಟ ನಿಮ್ಮ ಪಾಲಿಗೆ ಇರಲಿದೆ. ಮಾಹಿತಿ ಹಾಗೂ ಸಂವಹನ ಕ್ಷೇತ್ರದಲ್ಲಿ ಇರುವವರಿಗೆ ಗೌರವ ಹೆಚ್ಚಾಗಲಿದೆ. ಜತೆಗೆ ಯಶಸ್ಸು ನಿಮ್ಮ ಪಾಲಿಗೆ ಸಿಗಲಿದೆ. ವೈಯಕ್ತಿಕ ಸಂಬಂಧವು ಶಾಂತಯುತವಾಗಿ ಇರಲಿದೆ. ಶುಭ: 10,16,28 ಅಶುಭ: 13,19,29.





**ಧನು:** ಭೂ ಖರೀದಿ ಪ್ರಕ್ರಿಯೆಯಲ್ಲಿ ತೊಡಗಲಿದ್ದೀರಿ. ಈಗಾಗಲೇ ವ್ಯಾಜ್ಯಗಳು ಇದ್ದಲ್ಲಿ ಅವುಗಳನ್ನು ನಿವಾರಿಸಿಕೊಳ್ಳಲು ಸಫಲರಾಗುತ್ತೀರಿ. ವಾಸ್ತವದಲ್ಲಿ ಸಂತೋಷ ಪಡುವುದಕ್ಕೆ ಬೇಕಾದ ಸೌಕರ್ಯಗಳನ್ನು ಪಡೆಯಲಿದ್ದೀರಿ. ಉದ್ಯೋಗಸ್ಥರಿಗೆ ಬಡ್ತಿ ಅವಕಾಶಗಳು ಹೆಚ್ಚಿವೆ. ಶುಭ: 11,14,28 ಅಶುಭ: 13,22,29.

**ಮಕರ:** ವೃತ್ತಿ ಜೀವನದಲ್ಲಿ ದೊರೆಯುವ ಅವಕಾಶಗಳನ್ನು ಸದ್ಬಳಕೆ ಮಾಡುವ ಕಡೆಗೆ ನಿಮ್ಮ ಗಮನ ಇರುತ್ತದೆ. ಭೂಮಿ ಖರೀದಿ ಬಗ್ಗೆ ಆಸಕ್ತರಾಗಿದ್ದಲ್ಲಿ ನಿಮ್ಮ ಪ್ರಯತ್ನ ಆರಂಭಿಸುವುದಕ್ಕೆ ಇದು ಸೂಕ್ತ ಸಮಯ. ನಿಮ್ಮ ಪ್ರಾಮಾಣಿಕ ಪ್ರಯತ್ನದಿಂದ ಯಶಸ್ಸು ಸಾಧಿಸಲಿದ್ದೀರಿ. ಶುಭ: 11,14,26 ಅಶುಭ: 15,17,29.





**ಕುಂಭ:** ನೀವು ಅಂದುಕೊಂಡ ವಿವಿಧ ಕೆಲಸಗಳನ್ನು ಶುರು ಮಾಡುವುದಕ್ಕೆ ಸೂಕ್ತ ಸಮಯ. ನಿಮ್ಮ ವಿವೇಚನಾಶಕ್ತಿ ಹಾಗೂ ಧೈರ್ಯ ಅಗಾಧ ಪ್ರಮಾಣದಲ್ಲಿ ಹೆಚ್ಚಲಿದೆ. ಸಂಗಾತಿ ಮಕ್ಕಳ ಜತೆಗೆ ಉತ್ತಮವಾದ ಸಮಯ ಕಳೆಯಲಿದ್ದೀರಿ. ಶುಭ: 14,18,29 ಅಶುಭ: 10,16,27.

**ಮೀನ:** ಕೆಲಸ ಕಾರ್ಯಗಳನ್ನು ಪೂರೈಸಲು ಉದ್ಯೋಗ ಸ್ಥಳದಲ್ಲಿ ಶ್ರಮಿಸಲಿದ್ದೀರಿ. ಪ್ರೀತಿ– ಪ್ರೇಮದಲ್ಲಿ ಇರುವವರಿಗೆ ಸಂಗಾತಿ ಜತೆಗಿನ ಬಾಂಧವ್ಯ ಇನ್ನಷ್ಟು ಗಟ್ಟಿಯಾಗಲಿದೆ. ಆರೋಗ್ಯವು ಉತ್ತಮವಾಗಿರುತ್ತದೆ. ವೈವಾಹಿಕ ಜೀವನವು ಸಂತುಷ್ಟವಾಗಿರುತ್ತದೆ. ಶುಭ: 6,15,28 ಅಶುಭ: 10,14, 23.

